# ಪ್ರೊ. ಬಿ.ವೈ. ಲಲಿತಾಂಬ

## ಹಿಂದಿ ಪರಿಸರದಲ್ಲಿ ಕನ್ನಡದ ಕಂಪು ಪಸರಿಸಿದ ಧೀಮಂತೆ



**ಆರ್. ಲಕ್ಷ್ಮೀನಾರಾಯಣ**

ಮಹಿಳೆಯರು ಕನ್ನಡದಲ್ಲಿ ವಿಪುಲವಾಗಿ ಸಾಹಿತ್ಯರಚನೆಗೆ ತೊಡಗಿಕೊಂಡದ್ದೇನಿದ್ದರೂ ಇಪ್ಪತ್ತನೇ ಶತಮಾನದ ಉತ್ತರಾರ್ಧದಿಂದ ಎನ್ನಬಹುದು. ಅಲ್ಲಿಯವರೆಗೆ ಸಾಹಿತ್ಯ ರಚಿಸುತ್ತಿದ್ದ ಮಹಿಳೆಯರು ಕೇವಲ ಬೆರಳೆಣಿಕೆಯಷ್ಟು ಮಂದಿ. ಪ್ರಾರಂಭಿಕ ವರ್ಷಗಳಲ್ಲಿ ಅವರು ಜನಪ್ರಿಯ ಕಾದಂಬರಿ, ಮತ್ತು ಕಥಾಕ್ಷೇತ್ರಕ್ಕಷ್ಟೇ ಸೀಮಿತವಾಗಿದ್ದರು. ಪುರುಷ ಪ್ರತಿಷ್ಠಾ ಸಮಾಜ ಮಹಿಳೆಯರ ಬರವಣಿಗೆಯನ್ನೆಲ್ಲಾ 'ಅಡುಗೆಯ ಮನೆಯ ಸಾಹಿತ್ಯ' ಎಂಬ ಬೀಸುಹೇಳಿಕೆಯ ಮೂಲಕ ತುಚ್ಛೀಕರಿಸುತ್ತ ದೂರವಿಟ್ಟದ್ದೇ ಹೆಚ್ಚು. ಅದಕ್ಕೆ ಅವರು ಕೊಡುತ್ತಿದ್ದ ಪ್ರಮುಖ ಕಾರಣ ಮಹಿಳೆಯ ಅನುಭವಲೋಕ ಅತ್ಯಂತ ಸೀಮಿತ ಎಂದು. ಇದು ಕನ್ನಡಕ್ಕಷ್ಟೇ ಸೀಮಿತವಾದ ಪರಿಸ್ಥಿತಿಯೇನಲ್ಲ; ಹೆಚ್ಚು ಕಡಿಮೆ ಭಾರತದ ಎಲ್ಲ ದೇಶಭಾಷೆಗಳ ಮಹಿಳೆಯರ ಬರಹದ ಕುರಿತ ಲೇಖಕರ ಧೋರಣೆ ಇದೇ ಆಗಿತ್ತು.

ಇಪ್ಪತ್ತನೇ ಶತಮಾನದ ಉತ್ತರಾರ್ಧದಿಂದ ಬರವಣಿಗೆಗೆ ತೊಡಗಿಸಿಕೊಂಡ ಲೇಖಕಿಯರು ಭಾವಗೀತೆ, ಮಹಾಕಾವ್ಯ, ಸಂಶೋಧನೆ, ಪ್ರವಾಸ ಲೇಖನ, ಪ್ರಬಂಧ, ಕಥೆ, ಕಾದಂಬರಿ, ಅನುವಾದ ಹೀಗೆ ಸಾಹಿತ್ಯದ ಎಲ್ಲ ಕ್ಷೇತ್ರಗಳಲ್ಲಿ ರಚನೆಯನ್ನು ಪ್ರಾರಂಭಿಸಿ ಲೇಖಕರಿಗೆ ಯಾವ ರೀತಿಯಲ್ಲೂ ತಮ್ಮ ಬರವಣಿಗೆ ಕಡಿಮೆಯದಲ್ಲ ಎಂದು ತೋರಿಸಿರುವುದು ಮಾತ್ರವಲ್ಲ, ಕೆಲ ಸಂದರ್ಭಗಳಲ್ಲಿ ಪುರುಷರನ್ನೂ ಮೀರಿಸುವ ರೀತಿಯಲ್ಲಿ ತಮ್ಮ ಛಾಪನ್ನು ಬೀರುತ್ತಿದ್ದಾರೆ. ಪ್ರೊ. ಬಿ. ವೈ. ಲಲಿತಾಂಬ ಇಂಥ ಒಂದು ಅಪರೂಪದ ವರ್ಗಕ್ಕೆ ಸೇರಿದ ಲೇಖಕಿ. ಇದೀಗ 80 ವರ್ಷಗಳನ್ನು ದಾಟಿ ಮುನ್ನಡೆಯುತ್ತಿದ್ದರೂ (ಜನನ: 1943 ಮಾರ್ಚ್ 6), ದೇಹಾರೋಗ್ಯ ಅಷ್ಟೇನೂ ಸರಿಯಿಲ್ಲದಿದ್ದರೂ ಅವರ ಉತ್ಸಾಹ ಕಿಂಚಿತ್ತೂ ಕುಗ್ಗಿಲ್ಲ. ಈಗಲೂ ದೂರದ ದೆಹಲಿಯಲ್ಲೋ, ಅಲಹಾಬಾದಿನಲ್ಲೋ ವಿಚಾರಸಂಕಿರಣಕ್ಕೆ ಆಹ್ವಾನ ಬಂದಿತೆಂದರೆ ಅಹೋರಾತ್ರಿ ಕುಳಿತು ಪ್ರಬಂಧ ಸಿದ್ಧಪಡಿಸಿ ಮಂಡಿಸಲು ಹೊರಟರೆಂದೇ ಲೆಕ್ಕ.

ಲಲಿತಾಂಬ ಅವರ ಮನೆಯ ಮಾತು ತೆಲುಗಾದರೂ ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಬಿ.ಎ. ಓದುವಾಗ ಹಿಂದಿಯ ಜೊತೆಗೆ ಐಚ್ಛಿಕ ಕನ್ನಡದ ವಿದ್ಯಾರ್ಥಿಯಾಗಿ ತೀನಂಶ್ರೀ, ಡಿಎಲ್‌ಎನ್, ಎಸ್‌ವಿಪಿ ಮುಂತಾದ ಕನ್ನಡದ ಹಿರಿಯ ಆಚಾರ್ಯರ